ಬೆಳಗಿನ ಜಾವ ಸುಮಾರು ಐದುವರೆ... ಸುಬ್ರಮಣ್ಯಪುರ ಪೊಲೀಸ್ ಠಾಣೆಯಲ್ಲಿ ಎಲ್ಲಿಲ್ಲದ ಓಡಾಟ. ನಗರ ಪೊಲೀಸ್ ಕಮಿಷನರ್ ಆ ಠಾಣೆಗೆ ಭೇಟಿ ಕೊಡಲಿದ್ದರು. ಠಾಣೆಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಎಸ್‌ಐ ಗಂಗಾಧರ ಬಹಳ ಒತ್ತಡದಲ್ಲಿ ಇದ್ದ. ಅವನ ಮೇಲಾಧಿಕಾರಿಗಳೆಲ್ಲರೂ ಅಲ್ಲಿಯೇ ಇದ್ದರು. ಅವರೆಲ್ಲ ಕಾಯುತ್ತಿದ್ದುದು ಕಮಿಷನರ್‌ಗೆ ಅಲ್ಲ, ರಾಜ್ಯದ ಗೃಹ ಕಾರ್ಯದರ್ಶಿಗಾಗಿ. ಅವರು ತಮ್ಮ ಮನೆಯ ಡ್ರೈವರ್‌ನ ಮೇಲೆ ದೂರು ಕೊಡಲು ಖುದ್ದಾಗಿ ಬರುವವರಿದ್ದರು.

ಠಾಣೆಯ ಎದುರು ಟೀವಿ ಮಾಧ್ಯಮದವರು, ಪತ್ರಕರ್ತರು ಸುಮಾರು ಅರ್ಧ ಗಂಟೆಯಿಂದ ಕಾಯುತ್ತಿದ್ದರು. ಅವರಿಗೆ ಗೃಹ ಕಾರ್ಯದರ್ಶಿ ಇಲ್ಲಿಯವರೆಗೆ ದೂರು ಕೊಡಲು ಬರಲಿದ್ದಾರೆ ಎಂಬುದು ಹೇಗೆ ತಿಳಿಯಿತು ಎಂಬುದೇ ಆಶ್ಚರ್ಯ. ಆದರೆ ಪತ್ರಕರ್ತರ ಸುದ್ದಿಯ ಜಾಡು ಹಿಡಿಯುವ ಚಾಕಚಕ್ಯತೆ, ಸಂಪರ್ಕಗಳ ಬಗ್ಗೆ ಗೊತ್ತಿದ್ದ ಪೊಲೀಸರಿಗೆ ಅದು ಅಂತಹ ವಿಶೇಷ ಎಂದು ಅನ್ನಿಸಲಿಲ್ಲ.

ಪತ್ರಕರ್ತರು ಸುದ್ದಿಗಾಗಿ ಅತ್ತ ಇತ್ತ ಸುಳಿದಾಡುತ್ತಿದ್ದರು. ಇದನ್ನು ಮೊದಲೇ ಅರಿತಿದ್ದ ಕಮಿಷನರ್ ತಾನು ಬರುವವರೆಗೂ ಯಾರನ್ನೂ ಮಾಧ್ಯಮದವರ ಬಳಿ ಮಾತಾಡಲು ಬಿಡಬಾರದು ಮತ್ತು ನಾಲಿಗೆ ಚಪಲ ಇರುವ ಕೆಳಹಂತದ ನೌಕರರನ್ನು ಹೊರಗೆ ಬಿಡಬಾರದೆಂದು ಕಟ್ಟಪ್ಪಣೆ ಮಾಡಿದ್ದರು. ಅದೆಲ್ಲದರ ನಡುವೆಯೇ ಒಬ್ಬ ಪತ್ರಕರ್ತ ಟೀ ತಂದು ಕೊಡುವ ಹುಡುಗನ ಬಳಿ ಒಂದು ಮೊಬೈಲ್ ಕಳುಹಿಸಿ ಒಳಗೇನು ನಡೆಯುತ್ತಿದೆ ಎಂದು ತಿಳಿದುಕೊಳ್ಳುವ ವ್ಯರ್ಥ ಪ್ರಯತ್ನ ಮಾಡಿ ಸೋತಿದ್ದ.

ಕಮಿಷನರ್ ಕಾರು ಬರುತ್ತಿದ್ದಂತೆಯೇ ಅಲ್ಲಿದ್ದವರ ಕುತೂಹಲ ಹೆಚ್ಚಾಯಿತು. ಅಲ್ಲಿ ನೆರೆದಿದ್ದ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರ ಕೊಡದೇ ಕೇಳಿಸಲೇ ಇಲ್ಲವೇನೋ ಎಂಬಂತೆ ಒಳಗೆ ಓಡಿದರು ಕಮಿಷನರ್. ಕೆಲವು ಪತ್ರಕರ್ತರು ಅವರ ಡ್ರೈವರ್ ಅನ್ನು ಮಾತನಾಡಿಸಲು ಹೋಗಿ ಅವನಿಂದಲೂ ಏನೂ ಸಿಗದೆ ವಾಪಸ್ ಬಂದರು.

ಕಮಿಷನರ್ ಒಳಬರುತ್ತಿದ್ದಂತೆಯೇ ಎಲ್ಲಾ ಎದ್ದು ನಿಂತು ಸೆಲ್ಯೂಟ್ ಮಾಡತೊಡಗಿದರು.

"ಓಕೆ... ಓಕೆ... ಪ್ರೋಟೋಕಾಲ್ ಬೇಡ. ಗಂಗಾಧರ್, ಮೀಟಿಂಗ್ ಅರೇಂಜ್ ಮಾಡಿದ್ದೀಯಾ? ಹೋಂ ಸೆಕ್ರೇಟರಿಗೆ... ಸ್ವಲ್ಪ ಹೊತ್ತು ಬಿಟ್ಟು ಬನ್ನಿ ಅಂತ ಹೇಳಿದ್ದೇನೆ."

ಇನ್‌ಸ್ಪೆಕ್ಟರ್ ಗಂಗಾಧರ ತನ್ನ ಕ್ಯಾಬಿನ್‌ನಲ್ಲಿಯೇ ಆರೇಳು ಚೇರ್ ಹಾಕಿ ಮೀಟಿಂಗ್‌ಗೆ ಏರ್ಪಾಟು ಮಾಡಿದ್ದ. ಅವನಿಗೆ ಇನ್ನೂ ಈ ತರಾತುರಿ ಯಾಕೆ ಎಂದು ಅರ್ಥ ಆಗಿರಲಿಲ್ಲ. ಅವನಿಗೆ ಬೆಳಗ್ಗೆ ನಾಲ್ಕು ಗಂಟೆಗೆ ಫೋನ್ ಬಂದಾಗ ತಿಳಿದಿದ್ದು ಇಷ್ಟೇ...

'ಗೃಹ ಕಾರ್ಯದರ್ಶಿ ಮನೆಯ ಡ್ರೈವರ್ ಅವರ ಮನೆಯಲ್ಲಿ ಸುಮಾರು ಹತ್ತು ವರ್ಷಗಳಿಂದ ಕೆಲಸ ಮಾಡುತ್ತಿದ್ದು, ಇತ್ತೀಚೆಗೆ ಸಂಬಳದ ವಿಚಾರದಲ್ಲಿ ಜಗಳ ಆಡಿ ಕೆಲಸ ಬಿಟ್ಟಿದ್ದ. ನಿನ್ನೆಯಿಂದ ಗೃಹ ಕಾರ್ಯದರ್ಶಿಯವರ ಖಾಸಗಿ ನಂಬರ್‌ಗೆ ಫೋನ್ ಮಾಡಿ ಹೀಗೆ ಹೇಳಿದ್ದಾನೆ: ಗೃಹ ಕಾರ್ಯದರ್ಶಿಯವರು ಅವರ ಸ್ನೇಹಿತನ ಫಾರಂ ಹೌಸ್‌ನಲ್ಲಿ ಇರುವಾಗ ಒಂದು ಸಿಡಿ ಮಾಡಿದ್ದು, ಅವನನ್ನು ವಾಪಸ್ ಕೆಲಸಕ್ಕೆ ತೆಗೆದುಕೊಂಡು ಹೆಚ್ಚಿನ ಸಂಬಳ ಕೊಡದಿದ್ದರೆ ಸಿಡಿಯನ್ನು ಪತ್ರಿಕೆ ಹಾಗೂ ಚಾನೆಲ್‌ಗಳಿಗೆ ಕೊಡುತ್ತೇನೆ, ಸಾಮಾಜಿಕ ಜಾಲತಾಣಗಳಲ್ಲಿ ಹಾಕುತ್ತೇನೆ' ಎಂದು ಅವರನ್ನು ಅವನು ಹೆದರಿಸಿದ್ದಾನೆ. ಈ ಕುರಿತಂತೆ ಅವರು ದೂರು ಕೊಡಲು ಬರುತ್ತಿದ್ದಾರೆ... ಯಾವುದೇ ತೊಂದರೆ ಆಗಬಾರದು.'